1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ
ಸಿ.ಸಿ. ನಂಬ್ರ:2366/2015

ಚಾಸಾ:4 ಪ್ರಾಸಾ:3

ದಿನಾಂಕ: 23.01.2026

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ಜಲಜಾ |
| ಗಂಡನ ಹೆಸರು | : | ದಿನೇಶ |
| ವಯಸ್ಸು | : | 54 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ ಸ್ಥಳ | : | ಕೋಟೇಶ್ವರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ಚಾಸಾ-1 ನನ್ನ ಅಕ್ಕನ ಮಗ, ಚಾಸಾ-2 ನನ್ನ ಅಕ್ಕ.

ದಿ: 07-12-2014 ರಂದು ಕೊಟೇಶ್ವರದ ಜಾತ್ರೆ ಇದ್ದ ಕಾರಣ ನಾನು ಬಂದಿದ್ದು, ನನ್ನ ಅಕ್ಕನಾದ ಚಾಸಾ-2 ರವರಿಗೆ 2 ಪವನ್ ಮಾಂಗಲ್ಯ ಸರ ಮತ್ತು ಒಂದು ಜೊತೆ ಕಾಲುಂಗುರವನ್ನು ಚಾಸಾ-2 ರವರ ಮನೆಯಲ್ಲಿ ಇರಿಸಿರುತ್ತೇನೆ. ನನಗೆ ವಯಸ್ಸಾದ ತಾಯಿ ಮತ್ತು ಮಾನಸಿಕವಾದ ಅಕ್ಕ ಇದ್ದ ಕಾರಣ ಭದ್ರತೆಗಾಗಿ ಅವುಗಳನ್ನು ಚಾಸಾ-2 ರವರ ಬಳಿ ನೀಡಿರುತ್ತೇನೆ. ನಾವು 12 ಗಂಟೆಗೆ ಹೋಗಿದ್ದು ಮಧ್ಯಾಹ್ನ 3 ಗಂಟೆಗೆ ವಾಪಸ್ಸು ಬಂದು ನೋಡಿದಾಗ ಮನೆಯ ಮುಂದಿನ ಬಾಗಿಲಿನ ಚಿಲಕ ಒಡೆದು ಒಳಗೆ ಇದ್ದ ಬೀರುವಿನ ಬೀಗವನ್ನು ಜಖಂಗೊಳಿಸಿ ಒಳಗೆ ಇದ್ದ ಭದ್ರತಾ ಲಾಕಾರ್ ನಿಂದ ಒಟ್ಟು 130 ಗ್ರಾಂ ಚಿನ್ನ ಹಾಗೂ ನಗದು ರೂಪಾಯಿ 8 ಸಾವಿರ ಕಳ್ಳತನ ಮಾಡಿ ಹಿಂದಿನ ಬಾಗಿಲಿನಿಂದ ಹೋಗಿರುವುದು ಕಂಡು ಬಂದಿರುತ್ತದೆ. ಅನಂತರ ಚಾಸಾ-1 ರವರು ಈ ಬಗ್ಗೆ ಕುಂದಾಪುರ ಠಾಣೆಯಲ್ಲಿ ದೂರು ದಾಖಲಿಸಿರುತ್ತಾರೆ.

ದಿ: 10-12-2014ರಂದು ಪೊಲೀಸರು ಇಬ್ಬರು ಕಳ್ಳರನ್ನು ವಶಕ್ಕೆ ಪಡೆದು ಮಾಹಿತಿಯನ್ನು ನೀಡಿ ಎಲ್ಲಾ ಚಿನ್ನಾಭರಣಗಳು ಸಿಕ್ಕಿರುವುದಾಗಿ ತಿಳಿದು ಬಂದಿರುತ್ತದೆ. ಮೊದಲನೇ ಆರೋಪಿ ಸಂತೋಷ ಕುಮಾರ್ ಅಲಿಯಾಸ್ ಪುರುಷೋತ್ತಮನು 2ನೇ ಆರೋಪಿ ಉದಯ ಆಚಾರ್ ನೊಂದಿಗೆ ಸೇರಿಕೊಂಡು ಕಳ್ಳತನ ಮಾಡಿಸಿರುವುದಾಗಿ ತಿಳಿದು ಬಂದಿರುತ್ತದೆ. ನ್ಯಾಯಾಲಯದ ಮುಂದೆ ಇರುವ

2ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ನನ್ನ ಮಾಂಗಲ್ಯದ ಸರ ಹಾಗೂ ಒಂದು ಜೊತೆ ಕಾಲುಂಗುರ ವಾಪಸ್ಸು ಸಿಕ್ಕಿರುತ್ತದೆ. ಈ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಸಾಕ್ಷಿ ಪೋಟೋದಲ್ಲಿ ಮಾಂಗಲ್ಯ ಸರ ಹಾಗೂ ಕಾಲುಂಗುರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಆರ್ ಕೆ ಎಂ ರವರಿಂದಃ</u>**

ನಾನು ಈ ಘಟನೆಯ ಬಾಬ್ತು ಠಾಣೆಗೆ ಭೇಟಿ ನೀಡಿಲ್ಲ. ನನ್ನ ತಾಯಿ ಮತ್ತು ಅಕ್ಕನನ್ನು ನೋಡಿಕೊಳ್ಳಬೇಕಾದ ಕಾರಣ ಹೋಗಲು ಆಗಿರಲಿಲ್ಲ. ನನ್ನ ಮಾಂಗಲ್ಯದ ಸರ ಹಾಗೂ ಬೆಳ್ಳಿಯ ಕಾಲುಂಗುರ ಕಳುವು ಆಗಿರುತ್ತದೆ. ಮಾಂಗಲ್ಯ ಸರವನ್ನು ನನ್ನ ಮದುವೆ 2010 ರಲ್ಲಿ ಆಗುವ ವೇಳೆಯಲ್ಲಿ ಹಾಕಿದ್ದು ಎಲ್ಲಿಂದ ಖರೀದಿಸಿದ್ದು ಎಂದು ಗೊತ್ತಿಲ್ಲ. ಅದಕ್ಕೆ ಸಂಬಂಧಿಸಿದಂತೆ ನಾನು ರಶೀದಿಯನ್ನು ಹಾಜರುಪಡಿಸಿಲ್ಲ. ನನ್ನ ಗಂಡನ ಮನೆ ಉಳ್ಳಾಲ. ಅಲ್ಲಿ ಮನೆ ಇದೆ. ಕಳ್ಳತನ ಎಸಗಿದ ವ್ಯಕ್ತಿಗಳು ಯಾರೆಂದು ನಾನು ನೋಡಿಲ್ಲ. ಆರೋಪಿತರ ವಿವರಣೆಯನ್ನು ಚಾಸಾ-1 ರವರು ನನಗೆ ತಿಳಿಸಿರುತ್ತಾರೆ. ಅದನ್ನೇ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ. ನನ್ನ ಆಭರಣಗಳನ್ನು ಚಾಸಾ-2 ರವರಿಗೆ ಅದೇ ದಿನ ಕೊಟ್ಟಿರುತ್ತೇನೆ.

ಅದಕ್ಕೂ ಮೊದಲು ನಾನು ಅಕ್ಕನ ಮನೆಯ ಪಕ್ಕದಲ್ಲಿರುವ ನನ್ನ ತಾಯಿಯ ಮನೆಯಲ್ಲಿ ಇರಿಸಿಕೊಂಡಿದ್ದೆ. ಆಭರಣಗಳನ್ನು ನನ್ನ ಮನೆಯ ಕಪಾಟಿನಲ್ಲಿ ಇರಿಸುತ್ತಿದ್ದೆ. ಆಭರಣಗಳನ್ನು ಚಾಸಾ-1 ರವರು ವಾಪಸ್ಸು ತಂದಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

<u>**ಮರು ವಿಚಾರಣೆಃ** ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**